**ದಿ: 14-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**<u>ಪಾಟೀ ಸವಾಲು: ವಾದಿಯ ಪರ ಶ್ರೀ ಎಮ್ ಬಿ ಜೆ ವಕೀಲರಿಂದ:</u>**

ನಾನು 10 ನೇ ತರಗತಿಯವರೆಗೆ ಕಲಿತ್ತಿದ್ದೇನೆ. ಬಿ. ಗುಡಿಹಾಳ ಹಾಗೂ ದುಮ್ಮವಾಡ ಗ್ರಾಮದಲ್ಲಿ ಕಲಿತ್ತಿದ್ದೇನೆ. ಕನ್ನಡ ದಾಖಲೆಗಳನ್ನು ನನಗೆ ಓದಲು ಬರುತ್ತದೆ. ನನ್ನ ಸ್ವಂತ ಊರು ಬಿ. ಗುಡಿಹಾಳ. ಹುಟ್ಟಿದಾಗಿನಿಂದ ಬಿ.ಗುಡಿಹಾಳ ಗ್ರಾಮದಲ್ಲಿ ಇದ್ದೇನೆ. ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ, ವಾದಿ ಆಸ್ತಿ ಬೇಕು ಎಂದು ದಾವೆ ಸಲ್ಲಿಸಿದ್ದಾರೆ. ವಾದಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ಕೇಳಿ ತಿಳಿದುಕೊಂಡಿದ್ದೇನೆ.

ವಾದಿ ಶಾಲಾ ದಾಖಲಾತಿ ಹಾಜರುಪಡಿಸಿದ್ದಾರೆ. ನಾನು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತಿದೆ. ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಡಿ-2 ನ್ನು ಆಹಾರ ನಿರೀಕ್ಷಕರು ಕಲಘಟಗಿ ಇವರು ನೀಡಿದ್ದಾರೆ. ಮೂಲ ದಾಖಲೆಗೆ ಆಹಾರ ನಿರೀಕ್ಷಕರ ಸಹಿ ಹಾಗೂ ಶೀಲು ಮುದ್ರೆ ಇರುವುದಿಲ್ಲ. ದಿನಾಂಕ ಖಾಲಿ ಇರುತ್ತದೆ. ನಿಡಿ-2 ನಕಲು ಪ್ರತಿ. ಮೂಲ ದಾಖಲೆಯನ್ನು ಪರಿಶೀಲಿಸಿ ನಕಲು ಪ್ರತಿ ನೀಡುತ್ತಾರೆ. ನಿಡಿ-2 ರಲ್ಲಿ ಅಸಲುನಂತೆ ನಕಲು ಎಂದು ನಮೂದಿಸಿ ನೀಡಿರುತ್ತಾರೆ. ದಾಖಲೆ ಕೋರಿದಾಗ ಅದಕ್ಕೆ ಅರ್ಜಿದಾರರ ಹೆಸರು, ದಿನಾಂಕ ಇತ್ಯಾದಿ ವಿವರ ನೀಡುತ್ತಾರೆ. ನಿಡಿ-2 ರಲ್ಲಿ ಈ ಬಗ್ಗೆ ಉಲ್ಲೇಖವಿರುವುದಿಲ್ಲ. ನಿಡಿ-2 ನ್ನು ಆಹಾರ ಇಲಾಖೆಯಿಂದ ಪಡೆದಿದ್ದೇನೆ. ಅದಕ್ಕೆ ಆಹಾರ ಇಲಾಖೆಯ ಮೊಹರು ಇರುವುದಿಲ್ಲ. ನಿಡಿ-2 ನ್ನು ತಾಲೂಕ ಪಂಚಾಯತ ಯೋಜನಾ ಅಧಿಕಾರಿಗಳು ನೀಡಿದ್ದಾರೆ ಎಂದರೆ ನಿಜ. ನಿಡಿ-2 ನ್ನು ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಿಡಿ-5 ನ್ನು ಬಿ. ಗುಡಿಹಾಳ ಗ್ರಾಮದ ಶಾಲಾ ಮುಖ್ಯೋಪಾಧ್ಯರ ನೀಡಿದ್ದಾರೆ. ಸದರಿಯವರು ನೀಡಿದ ಎಲ್ಲಾ ದಾಖಲೆಗಳು ಸರಿಯಾಗಿರುತ್ತವೆ. ನಿಪಿ-8 ನ್ನು ಬಿ. ಗುಡಿಹಾಳ ಗ್ರಾಮದ ಶಾಲಾ ಮುಖ್ಯೋಪಾಧ್ಯರ ನೀಡಿದ್ದಾರೆ. ಶಾಲೆಗೆ ದಾಖಲು ಮಾಡುವಾಗ ತಂದೆಯ ಹೆಸರು ನಮೂದು ಮಾಡುತ್ತಾರೆ. ನನ್ನ ಶಾಲೆಯ ದಾಖಲೆಗಳನ್ನು ನೋಡಿ ನಿಡಿ-5 ನ್ನು ನೀಡಿದ್ದಾರೆ ಎಂದರೆ ನಿಜ. ನಿಪಿ8 ನ್ನು ವಾದಿಯ ದಾಖಲೆಗಳನ್ನು ನೋಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ8 ಖೊಟ್ಟಿ ದಾಖಲೆ ಎಂದು ದಾವೆಯಲ್ಲಿ ಸಲ್ಲಿಸಿದಾಗ ನನಗೆ ಗೊತ್ತಾಗಿದೆ. ಸದರಿ ದಾಖಲೆಯನ್ನು ನೀಡಿದವರು ವಿರುದ್ಧ ದೂರು ನೀಡಿಲ್ಲ. 1 ನೇ ಪ್ರತಿವಾದಿಯ ತಂದೆ ತಾಯಿ ಹೆಸರು ನನಗೆ ಗೊತ್ತಿಲ್ಲ. ಆದರೆ ನನ್ನ ತಂದೆ 1 ನೇ ಪ್ರತಿವಾದಿ ನನ್ನ ಸೋದರ ಮಾವನ ಮಗಳು ಎಂದು ಹೇಳುತ್ತಿದ್ದರು. ವಾದಿ ದುಮ್ಮವಾಡ ಗ್ರಾಮದಲ್ಲಿ ವಾಸವಾಗಿರುವುದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಮುತ್ತನಾಳ ಗ್ರಾಮದಲ್ಲಿ 4 ನೇ ಪ್ರತಿವಾದಿ ಕೊಣ್ಣೂರ ಗ್ರಾಮದಲ್ಲಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿ ಬಿ.ಗುಡಿಹಾಳ ಗ್ರಾಮದಲ್ಲಿ ವಾಸವಾಗಿರುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ದಾವಾ ಸಮನ್ಸನ್ನು ಎಲ್ಲಿ ಜಾರಿ ಮಾಡಿದ್ದಾರೆ ಎಂದು ವರದಿ ಸಲ್ಲಿಸಿರುವುದು ನನಗೆ ಗೊತ್ತಿದೆ. ಕಲಘಟಗಿಯಲ್ಲಿ ಸಮನ್ಸ ಜಾರಿ ಮಾಡಿದ್ದಾರೆ. ಸದರಿ ವಿಷಯವನ್ನು ನನ್ನ ತಂದೆಯವರು ಹೇಳಿದ್ದಾರೆ. 2008 ರಲ್ಲಿ ನನ್ನ ತಂದೆ ಹೇಳಿದ್ದಾರೆ. ಸಾಕ್ಷಿ ಪುನಃ ಸಮನ್ಸ ಜಾರಿಯಾದ ವಿಷಯ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿಯ ತಂದೆ ತಾಯಿ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಗುಡಿಹಾಳ ಗ್ರಾಮದಲ್ಲಿ ಇದ್ದರು.

ನಾನು ಈ ಪ್ರಕರಣದಲ್ಲಿ ತಕರಾರು ಸಲ್ಲಿಸಿದ್ದೇನೆ. ಅದನ್ನು ಓದಿ ತಿಳಿದುಕೊಂಡಿದ್ದೇನೆ, ನನಗೆ ತಿಳಿಯದ ವಿಷಯವನ್ನು ವಕೀಲರಿಂದ ಕೇಳಿ ತಿಳಿದುಕೊಂಡಿದ್ದೇನೆ. 1 ನೇ ಪ್ರತಿವಾದಿ ಬಿ.ಗುಡಿಹಾಳ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದು ನನ್ನ ತಕರಾರಿನಲ್ಲಿ ತಿಳಿಸಿದ್ದೇನೆ. (ವಾದಿಯ ಪರ ವಕೀಲರು ಸಾಕ್ಷಿಗೆ ಕೊಟ್ಟು ಓದಿ ಹೇಳಲು ತಿಳಿಸಿರುತ್ತಾರೆ.) ನನ್ನ ತಕರಾರಿನಲ್ಲಿ ಈ ಬಗ್ಗ ತಿಳಿಸಿಲ್ಲ ಎಂದರೆ ನಿಜ. 1 ನೇ ಪ್ರತಿವಾದಿಯ ಗಂಡನ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿಯು ಕಲ್ಲಪ್ಪನ ಹೆಂಡತಿಯು ಅಲ್ಲ ಎಂದು ತನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ. 1 ನೇ ಪ್ರತಿವಾದಿ ಶಾಂತವ್ವ ಕಲ್ಲಪ್ಪನ ಹೆಂಡತಿ ಅಲ್ಲ ಬೇರೆಯವರ ಹೆಂಡತಿಯೆಂದು ನನ್ನ ತಕರಾರಿನಲ್ಲಿ ತಿಳಿಸಿಲ್ಲ. ಶಾಂತವ್ವ ಹಾಗೂ ಕಲ್ಲಪ್ಪನ ಬಿ.ಗುಡಿಹಾಳ ಗ್ರಾಮದಲಿಲ ಸುಮಾರು ವರ್ಷಗಳಿಂದ ವಾಸವಾಗಿದ್ದರು ಎಂದರೆ ಸರಿಯಲ್ಲ.

ಶಾಂತವ್ವ ಇವರು ಕಲ್ಲಪ್ಪನ ಹೆಂಡತಿಯೆಂದು ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ನಿಜ. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಎಂದರೆ ನಿಜ. ಜೀವನಾಂಶ ನೀಡುವಂತೆ ಆದೇಶವಾಗಿತ್ತು. ಅದರ ವಿರುದ್ಧ ಸಲ್ಲಿಸಿದ ಮೇಲ್ಮನವಿನಲ್ಲಿ ಶಾಂತವ್ವ ಕಲ್ಲಪ್ಪನ ಜೊತೆಗೆ ಬಾಳ್ವೆ ಮಾಡಿಲ್ಲ ಎಂದು ಜೀವನಾಂಶ ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಂಡಿದೆ ಎಂದರೆ ಸಾಕ್ಷಿ ಹೆಂಡತಿಯಲ್ಲ ಎಂದು ವಜಾಗೊಂಡಿದೆ ಎಂದು ನುಡಿಯುತ್ತಾರೆ, ಮೇಲ್ಮನವಿಯಲ್ಲಿ ಹೆಂಡತಿಯಲ್ಲ ಎಂದು ಎಲ್ಲಿಯು ತೋರಿಸಿಲ್ಲ ಎಂದರೆ ಸಾಕ್ಷಿ ಅರ್ಜಿಯು ವಜಾಗೊಂಡಿದೆ ಎನ್ನುತ್ತಾರೆ. ಈ ಬಗ್ಗ ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ನಿಡಿ-6 ಇಂಗ್ಲೀಷನಲ್ಲಿದ್ದು ನನಗೆ ಓದಲು ಬರುವುದಿಲ್ಲ. ನಿಡಿ-6 ರ ಬಗ್ಗ ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ. ಕಲ್ಲಪ್ಪ ಸಲ್ಲಿಸಿದ ಮೇಲ್ಮನವಿ ಅರ್ಜಿ ಆತನ ಹತ್ತಿರ ಇದ್ದಿರಬಹುದು. ಅದು ಸಿಕ್ಕರೆ ಹಾಜರುಪಡಿಸುತ್ತೇನೆ. ನನ್ನ ತಕರಾರಿನಲ್ಲಿ ಸದರಿ ಅರ್ಜಿಯ ಬಗ್ಗ ತಿಳಿಸಿಲ್ಲ.

ದಾವಾ ಆಸ್ತಿಗಳು ಕಲ್ಲಪ್ಪನ ಪಿತ್ರಾರ್ಜಿತ ಆಸ್ತಿಗಳು. ದಾವಾ ಆಸ್ತಿಗಳು ವಾದಿ ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಜಮೀನುಗಳು ವಾದಿ ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಪುನಃ ನಮ್ಮ ಆಸ್ತಿಗಳು ಮಾತ್ರ ಇರುತ್ತವೆ ಎನ್ನುತ್ತಾರೆ. ಕಲ್ಲಪ್ಪನ 2021 ರಲ್ಲಿ ಮರಣ ಹೊಂದಿರುತ್ತಾರೆ. ಮರಣ

ಪ್ರಮಾಣ ಪತ್ರ ಇರುತ್ತದೆ. ವಾರಸಾ ಪ್ರಮಾಣ ಪತ್ರ ಇರುವುದಿಲ್ಲ. ವಾರಸಾ ಕೋರಿ ಸಲ್ಲಿಸಿದ ಅರ್ಜಿ ತಹಶೀಲ್ದಾರ ಕಚೇರಿಯಲ್ಲಿ ಇರುತ್ತವೆ. ನಾವು ವಾರಸಾ ಕೋರಿ ಅರ್ಜಿ ಸಲ್ಲಿಸಿಲ್ಲ. ಬಿ.ಗುಡಿಹಾಳ ಗ್ರಾಮದ ವಿ ಪಿ ಸಿ ನಂ. 148 ಕಲ್ಲಪ್ಪನ ಹೆಸರಿನಲ್ಲಿ ಇದೆ ಎಂದರೆ ನಿಜ. ನಾನು ವಾರಸಾ ಕೋರಿ ಅರ್ಜಿ ಸಲ್ಲಿಸಿದ್ದು ಅದಕ್ಕೆ ವಾದಿ ಹಾಗೂ 1ನೇ ಪ್ರತಿವಾದಿಯರು ತಕರಾರು ಸಲ್ಲಿಸಿದ್ದರು ಎಂದರೆ ನಿಜ. ವಾದಿ ವಾರಸಾ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸುಳ್ಳು. ಸದರಿ ಅರ್ಜಿಗೆ ನಾನು ತಕರಾರು ಕೊಟ್ಟಿಲ್ಲ. ವಾದಿ ಹಾಗೂ 1ನೇ ಪ್ರತಿವಾದಿ ಮತ್ತು ನಾವು ಅಂದರೆ 2 ರಿಂದ 4ನೇ ಪ್ರತಿವಾದಿಯರು ವಾರಸಾ ಕೋರಿ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದು ಕಲ್ಲಪ್ಪನಿಗೆ ಎರಡು ಜನ ಹೆಂಡತಿಯರು ಇದ್ದರಿಂದ ವಾರಸಾ ಪ್ರಮಾಣ ಪತ್ರ ನೀಡಲು ಬರುವುದಿಲ್ಲ ಎಂದು ತಿಳಿಸಿರುತ್ತಾರೆ.

ವಾದಿ ದಾವೆಯಲ್ಲಿ ವಂಶಾವಳಿ ಸಲ್ಲಿಸಿರಬಹದು. ವಾದಿ ವಂಶಾವಳಿಯನ್ನು ಕೊಟ್ಟಿರುವುದು ನನಗೆ ಗೊತ್ತಿಲ್ಲ. ವಂಶಾವಳಿ ಗೊತ್ತಿಲ್ಲದಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ವಂಶಾವಳಿ ತಿಳಿಸಿದ್ದೇವೆ. ವಂಶಾವಳಿಯನ್ನು ಚಿತ್ರಾ ಹಾಕಿ ತಿಳಿಸಿಲ್ಲ.

**(**ಈ ಹಂತದಲ್ಲಿ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು**,** ಕಾಲಾವಕಾಶ ನೀಡಿ ಮುಂದುಡಲಾಯಿತು.**)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**)

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**